ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 30ನೇ ಏಪ್ರೆಲ್ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ಡಿಸ್ಟ್ರಿಕ್ಟ್ ನಾರಾಯಣದುರ್ಗ ಮತ್ತು ಸ್ಟೇಟ್ ಫಾರೆಸ್ಟ್ ಬಾಬತು ಈ ಕೆಳಗೆ ವಿವರಿಸಿರುವ ಪಸಾರೇ ಜಿನಸಿಗಳು ಸ್ರ 1895ನೇ ಇಸವಿ ಮೇ ತಾರೀಖು 25ರಲ್ಲು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಶ್ರೀರಂಗಪಟ್ಟಣದ ಸಂದಲ್ ಕೋಠಿಯಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಜಿನಸಿ ತಪ್ಸೀಲ್.	ಸುಮಾರು ಪೊತ್ತ.	
	ಮಣ.	ಪೌ.
ಮೇಣ	0	17
ದಿಂಡಿಗದ ಗೋಂದು	2	..
ಅಳಲೇಕಾಯಿ	1533	..
ಶೀಗೇಕಾಯಿ	90	..
ಅರಗು	200	..
ಹೊಂಗೇಬೀಜ	100	..

ಷರತ್ತು—ಮೈಸೂರು ಗೆಜೆಟ್ 95ನೇ ಏಪ್ರೆಲ್ 25ನೇ ಮಾರ್ಕ್ಕು ಮಿನಲ್ಲಿ ಚವಬೀನೆ ಮತ್ತು ಬೊಂಬು ವಿಷಯದಲ್ಲಿ ಘಾಯಿಫ್ ಮಾಡಿರುವ 1895ನೇ ಇಸವಿ ಮಾರ್ಚಿ 15ನೇ ಮಾರ್ಕ್ಕಂ 15229-ಆರ್. ಎಫ್. 155—92ನೇ ನಂಬರಿ ಗವರ್ನಮೆಂಟ್ ನೋಟಿಫಿಕೇಷನ್ ಮೇರೆ.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಹಾಸನ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 24ನೇ ಏಪ್ರೆಲ್ 1895.

1. ಕಂದಾಯದ ಬಾಕೀದಾರರಾದ ಈ ಕೆಳಗೆ ನಮೂದಿಸಿರುವ ಜೋಡೀದಾರರಿಂದ ಬರಬೇಕಾದ ಜಮ್ಮಾ ಕಂದಾಯದ ಬಾಕಿಗಾಗಿ ಹಿಡುವಳಿ ಹಕ್ಕು ತಪ್ಪಿಸಲ್ಪಟ್ಟು ಯಿಧೆ ಯಂದು ಪ್ರಕಟಿಸಲ್ಪಟ್ಟಿರುವ ಇದರಡಿ ನಮೂದಾಗುವ ಸ್ಥಿರಸ್ವತ್ತು ಹಾಸನ ಡಿಸ್ಟ್ರಿಕ್ಟ್ ಬೇಲೂರು ತಾಲ್ಲೂಕು ಕಜೇರಿಯಲ್ಲಿ ಜನರಲ್ ಅಸಿಸ್ಟೆಂಟ್ ಕಮ್ಮಿಷನರವರ ರೂಬರೂ ಈ ಕೆಳಗೆ ನಮೂದಾಗುವ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇಧೆ. 3,000—0—0 ರೂಪಾಯಿಗಳನ್ನು ಪ್ರಥಮ ಸವಾಲಾಗಿ ಇಟ್ಟುಕೊಂಡು ಹರಾಜು ಮಾಡಿಸಲ್ಪಡುತ್ತೆ.

ಹರಾಜು ಆ ದಿವಸ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ವಿಕ್ರಯಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894—95ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 828—1—3 ಪೈ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಕೇಕಡಾ 25ನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೆ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ, ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅವರು ಅದನ್ನು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲಿಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪರ್ಯಂತಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತಗದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮ್ಮಿಷನರವರಿಂದ ಹರಾಜು ಮಂಜೂರ್ ಮಾಡಲ್ಪಟ್ಟ ಕೂಡ್ಲೆ ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮ್ಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಒಂದು ಹರಾಜು

ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್‌ದಾರ್ಯಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ವುಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲೆ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಪೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಳತೆ.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಆಕಾರ.	ಸರಕಾರಕ್ಕೆ ಬರಬೇಕಾದ ನೋಟಿನ ಷೀ ನಗ್ದೌರಿ ಸಹಿತವಾದ ಬಾಕಿ ಹೊಬಲಗು.	ಹರಾಜು ತಾರೀಖು.	1893—94ನೇ ಸಾಲಿಗೆ ಹರಾಜಿನಲ್ಲಿ ಪದವನು ಸದರೀ ಸ್ವತ್ತಿಗಾಗಿ ಕೊಡಬೇಕಾದ ಹೊಬಲಗು.
1	2	3	4	5	6	7	8	9	10	11	12	13
						1		ಎಕರೆ. ಗು.	ರೂ. ಆ. ಪೈ.	ರೂ. ಆ. ಪೈ.		
ಚಿಕ್ಕನಾಯಕನಹಳ್ಳಿ.	ಜೋಡೀ ಹೆಬ್ಬೇನಹಳ್ಳಿ		ಸುಬ್ಬಾವಧಾನಿ ವಗ್ಗೈರೆ ರಾಮಕೃಷ್ಣ ವಧಾನಿ ವಗ್ಗೈರೆ ಲಕ್ಷ್ಮೀಪತಿಭಟ್ಟ, ಗೋಪಾಲಯ್ಯ ವಗ್ಗೈರೆ	..	..		ಖುಷ್ಕೀ ತರೀ ಪರಂಪೋಕು ಜುಮ್ಲಾ	162 2 59 36 53 17 275 15	37 0 0 264 6 7 3 4 0 304 10 7	821 1 3	1895ನೇ ಜೂ 15ನೇ ಕನಿಷಾರ	1893—94ನೇ ಸಾಲಿಗೆ 129—4—8 ಪೈ ಮತ್ತು ನೋಟಿನ ಷೀ ಬಡ್ಡೀ ಸಹ ಹರಾಜು ತಾರೀಖಿನ ವರಿಗೆ ಕೊಡಬೇಕಾಗು.
							ಸರಕಾರಕ್ಕೆ ಸಾಲಿಯಾನಾ ಕೊಡಬೇಕಾದಜೊಡೀ, ಲೋಕಲ್ ಫಂಡ್		111 0 0 18 4 8 129 4 8			

ಪಿ. ಎಸ್. ಪೂರ್ಣಯ್ಯ,
ಡೆಪ್ಯುಟಿ ಕಮ್ಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

1895ನೇ ಇಸವಿ ಏಪ್ರೆಲ್ 22ನೇ ಮಾರ್ಚ್ಯಂ, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,

I. ಈ ಕೆಳಗೆ ಕಂಡ ಶಿವಮೊಗ್ಗಾ ಡಿಸ್ಟ್ರಿಕ್ಟು ತಾಲ್ಲೂಕುಗಳ ಬಗನಿ ಕೇಂದಿ ವುತಾರ್ ಮತ್ತು ಮಾರುವ ಹಕ್ಕು ಸ್ ೧೮೯೫ನೇ ಜಾಲ್ಯೆ ಗುರ್ಯೆ ಲಾಗಾಯತು 1896ನೇ ಜೂ 30ರ ವರಿಗೆ ಗ್ರಾಮವಾರಾಗಿ ಆಗಲಿ ಅಥವಾ ಗ್ರಾಮ ಸಮುದಾಯತ್ವೇನ ಆಗಲಿ ಅಯಾಯ ತಾಲ್ಲೂಕು ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಇದರ ಕೆಳಗೆ ವಿವರಿಸಿರುವ ಪ್ರಕಾರ್ತುಗಳಿಗೆ ವಳಪಟ್ಟು ಆ ಯಾಯ ತಾಲ್ಲೂಕು ಕಚೇರಿ ರೂಬರೂ ಡೆಪ್ಯುಟಿ ಕಮ್ಮಿಷನರವರಿಂದ ಆಗಲಿ ಅಥವಾ ವಬ್ಬರು ಅಸಿಸ್ಟೆಂಟ್ ಕಮ್ಮಿಷನರವರಿಂದಾಗಲಿ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

	ತಾಲ್ಲೂಕು.		ಹರಾಜು ತಾರೀಖು.	
1	ಶಿಕಾರಿಪುರ	..	ಸ್ ೧೮೯೫ನೇ ಮೇ	8— 9
2	ಸೊರಬ	..	ಡಿಟೋ	11—12
3	ಸಾಗರ	..	ಡಿಟೋ	14—15
4	ನಗರ	..	ಡಿಟೋ	17—18
5	ತೀರ್ಥಹಳ್ಳಿ	..	ಡಿಟೋ	21—22

II. ಪ್ರತಿ ಒಂದು ಸರಕತ್ ಗುತ್ತೆಯನ್ನ ಚಡದರಖಾಸ್ತುದಾರನಿಗೆ ಕೊಡಲ್ಪಡುವದು, ಸದರೀ ಚಡದರಖಾಸ್ತು ಸಾಧ್ಯವಾದ ಮಟ್ಟಿಗೂ ಕಳದ ಸಾಲ್ ವೊಬಳ್ಳೌ ಕಮ್ಮಿ ಇರಕೂಡದು ಈ ಹರಾಜು ಅಸಿಸ್ಟೆಂಟ್ ಕಮ್ಮಿಷನರವರಿಂದ ಮಾಡಲ್ಪಟ್ಟಲ್ಲಿ ಅದು ಡೆಪ್ಯುಟಿ ಕಮ್ಮಿಷನರವರ ಮಂಜೂರಿಗೆ ವಳಪಟ್ಟು ಇರತಕ್ಕದ್ದಾಗಿ ಇರುತ್ತೆ ಅಂಥಾ ಹರಾಜಿಗೆ ಸಂಬಂಧಪಟ್ಟ ರಿಕಾರ್ಡುಗಳನ್ನು ಸದರೀ ಯವರು ಡೆಪ್ಯುಟಿ ಕಮ್ಮಿಷನರವರಲ್ಲಿಗೆ ಕಳುಹಿಸತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಯಾವದೊಂದು ದರಖಾಸ್ತು ಅಥವಾ ಚಡದರ ಖಾಸ್ತನ್ನಾದರೂ ಯಾವದೊಂದು ಕಾರಣವೂ ತಿಳಿಸದೆ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

III. ಹರಾಜಿನಲ್ಲಿ ಸವಾಲ್ ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಿಯಾಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕನ ಮೂಲಕವಾಗಿಯಾಗಲಿ ಹಾಜರಾಗಬೇಕು. ಮತ್ತು ಇಂಥಾ ಮನುಷ್ಯನು ನಿಗದಿಯಾದ ಅಂದಾಜಾ ವೊಬಲಗು ಪೈಕಿ ಕೇಕಡಾ ಐದು ರೂಪಾಯಿನಂತೆ ಆಗುವ ವೊಬಲಗು ಡಿವಾಜಿಟ್ ಕಟ್ಟುವ ತನಕ ಆತನ ಸವಾಲ್ ಅಂಗೀಕರಿಸಲಾಗುವದಿಲ್ಲ ಹರಾಜು ಆತನ ಹೆಸರಿಗೆ ಕೈದಾಗದೆ ಇದ್ದರೆ ಡಿವಾಜಿಟ್ ವೊಬಲಗು ಹರಾಜು ಮಾಡಿದ ಕೂಡ್ಲೆ ಆತನಿಗೆ ವಾಪಸ್ ಮಾಡಲ್ಪಡುತ್ತೆ.